ಶ್ರೀ ಯು.ಆರ್. ಸಭಾಪತಿ :— ನಾವು ಸ್ವಲ್ಪ ಹೆಚ್ಚು ಹೊತ್ತು ಕುಳಿತು ಕೆಲಸ ಮಾಡೋಣ. ಲೋಕಸಭೆಯಲ್ಲಿ ರಾತ್ರಿ 12 ಗಂಟೆಗಳವರೆಗೆ ಕುಳಿತಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ಲೋಕಸಭೆಯಲ್ಲಿ ಪಲ್ಟಿ ಹೊಡೆಯುತ್ತಾರೆ ಎಂದು ನಾವು ಇಲ್ಲಿ ಹೊಡೆಯಲು ಬರುತ್ತದೆಯೇ? ನಾವು ಇಲ್ಲಿ ಕೆಲಸಕಾರ್ಯಗಳನ್ನು ಮಾಡುವ ಬಗ್ಗೆ ಒಂದು ಸಮಯ ನಿಗದಿ ಮಾಡಿಕೊಳ್ಳೋಣ.

ಅಧ್ಯಕ್ಷರು :— ತಾವುಗಳು ನನ್ನ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. 17ನೇ ತಾರೀಖಿಗೆ ಬಜೆಟ್ ಮಂಡನೆ ಇದೆ. 16ನೇ ತಾರೀಖಿನಂದು ರಾಜ್ಯಪಾಲರ ಭಾಷಣಕ್ಕೆ ನಾವು ವಂದನಾರ್ಪಣಾ ನಿರ್ಣಯದ ಮೇಲೆ ಮಾತುಗಳನ್ನು ಮುಗಿಸಿ ಅದಕ್ಕೆ ಉತ್ತರಕೊಡಿಸಬೇಕು. ಅದನ್ನು ಪಾಸ್ ಮಾಡಿಕೊಳ್ಳಬೇಕಾಗಿದೆ. ನಮಗೆ ಉಳಿದಿರತಕ್ಕಂಥಾದ್ದು ಸೋಮವಾರ ಮತ್ತು ಮಂಗಳವಾರ ಮಾತ್ರ. ಈ ಎರಡು ದಿನಗಳಲ್ಲಿ ನಾನು ಎಷ್ಟು ಜನರಿಗೆ ಅಡ್‌ಜಸ್ಟ್ ಮಾಡಲಿ? ಒಬ್ಬ ಪ್ರಮುಖ ವಿರೋಧ ಪಕ್ಷದವರು ಮಾತನಾಡಿದರೆ ನಾಳೆ ನಾವು ಮಾತನಾಡುತ್ತೇವೆ ಎಂದು ಇನ್ನೊಬ್ಬರು ಹೇಳುತ್ತಾರೆ. ಹಾಗೆ ಮೇಲೇಜ್ ತೆಗೆದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ನಾವು ಎಲ್ಲವನ್ನೂ ಸರಿದೂಗಿಸಿಕೊಂಡು ಮತ್ತು ಅಡ್ ಜಸ್ಟ್ ಮಾಡಿಕೊಂಡು ಹೋಗಬೇಕು. ತಾವುಗಳೂ ನನ್ನ ಜೊತೆಗೆ ಸಹಕರಿಸಬೇಕು. ಇವೊತ್ತು ಅವರು ಮಾತನಾಡಿ ಮುಗಿಸಲಿ. ನಾಳೆ 9ಗಂಟೆಗೆ ಪ್ರಾರಂಭ ಮಾಡೋಣ. ನಾಳೆ ಪ್ರಮುಖ ವಿರೋಧ ಪಕ್ಷಗಳು ಅಡ್ ಜರ್ನ್ ಮೆಂಟ್ ಮೋಷನ್ ತರುವುದಿಲ್ಲ ಎಂದು ಮಾತುಕೊಡಬೇಕು. ಈಗಾಗಲೇ ನಾಳೆಗೆ 10 ಗಂಟೆಗೆ ಸಭೆ ಸೇರುತ್ತದೆ ಎಂದು ಸೂಚನೆ ಹೋಗಿದೆ. ನಾವು ಪತ್ರಿಕೆಯವರಿಗೂ ಹೇಳಿ 9-00 ಗಂಟೆಗೆ ಸಭೆ ಸೇರುತ್ತದೆ ಎಂದು ಅನೌನ್ಸ್ ಮಾಡಿಸುತ್ತೇವೆ. ಈಗ ಒಂದು ಗಂಟೆಗೆ ಕಾಲ ಕುಳಿತುಕೊಳ್ಳಿ. ಕಾಲಿಂಗ್ ಅಟೆನ್‌ಶನ್ ಮತ್ತು ಜೀರೋ ಅವರ್ಸ್ ಮುಗಿಸೋಣ.

7.10 ಪಿ.ಎಂ.

(1) ಗಮನಸೆಳೆಯುವ ಸೂಚನೆಗಳು

(1) ಗದಗ-ಬೆಟಗೇರಿಯಲ್ಲಿ ವಿದ್ಯುತ್ ವೋಲ್ಟೇಜ್ ಸರಿಯಿಲ್ಲದ ಕಾರಣದಿಂದ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಅಧ್ಯಕ್ಷರೇ, ಗದಗ-ಬೆಟಗೇರಿ ನಗರಕ್ಕೆ ವಿದ್ಯುತ್ ವೋಲ್ಟೇಜ್ ಸರಿಯಾಗಿ ಇಲ್ಲದ ಕಾರಣ ಕುಡಿಯುವ ನೀರಿಗೆ ಪಂಪುಗಳಿಂದ ನೀರು ಎತ್ತುವಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಇಂಧನ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಗದಗ್-ಬೆಟಗೇರಿ ಅವಳಿ ನಗರಕ್ಕೆ ನೀರು ಸರಬರಾಜು ಮಾಡಲು ಮೂರು ಕಡೆಗಳಲ್ಲಿ ಪಂಪಿಂಗ್ ಸ್ಟೇಷನ್‌ಗಳು ಕಾರ್ಯನಿರತವಾಗಿರುತ್ತವೆ. ಸದರೀ ಮೂರು ಪಂಪಿಂಗ್ ಸ್ಟೇಷನ್‌ಗಳ ಪೈಕಿ ಎರಡು ಪಂಪಿಂಗ್ ಸ್ಟೇಷನ್‌ಗಳಿಗೆ 33 ಕೆ.ವಿ.ಯಲ್ಲೂ ಹಾಗೂ ಒಂದು ಪಂಪಿಂಗ್ ಸ್ಟೇಷನ್‌ಗೆ 11 ಕೆ.ವಿ.ಯಲ್ಲೂ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ಪ್ರಸ್ತುತ ಬೇಸಿಗೆಯ ಕಾಲವಾದುದರಿಂದ, ಇಡೀ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆ ದಿನೇ ದಿನೇ ಹೆಚ್ಚಳಗೊಳ್ಳುತ್ತದೆ. ದಿನವಹಿ ವಿದ್ಯುತ್ತಿನ ಬೇಡಿಕೆಯು 76ರಿಂದ 78 ದಶಲಕ್ಷ ಯೂನಿಟ್ಟುಗಳಷ್ಟಾಗಿರುತ್ತದೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ಗೂ ಹಾಗೂ ಬೇಡಿಕೆಗೂ ಹೆಚ್ಚಿನ ಅಂತರವಿರುವ ಹಾರಣ ಓವರ್ ಲೋಡ್ ನಿಂದಾಗಿ ಇಡೀ ವ್ಯವಸ್ಥೆಯಲ್ಲಿ ಕಡಿಮೆ ವೋಲ್ಟೇಜ್ ನ ಪರಿಸ್ಥಿತಿ ಯುಂಟಾಗಿರುತ್ತದೆ. ಅಲ್ಲದೇ ಪ್ರತಿದಿನ ವ್ಯವಸ್ಥೆಯ ಸಮತೋಲನ ಮಾಡಲು ಲೋಡ್ ಶೆಡ್ಡಿಂಗ್ ಸಹ ಮಾಡಬೇಕಾಗುತ್ತದೆ. ಇದೇ ಕಾರಣದಿಂದಾಗಿ ಮುಂಡರಗಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಕಡಿಮೆ ವೋಲ್ಟೇಜ್‌ನ ಪರಿಸ್ಥಿತಿಯಿರುತ್ತದೆ. ಈ ವಿಷಯವನ್ನು ಮನಗಂಡು ಮೇಲ್ಕಂಡ ಪಂಪಿಂಗ್ ಸ್ಟೇಷನ್ನುಗಳಿಗೆ ಉತ್ತಮ ವೋಲ್ಟೇಜ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲು ಮುಂಡರಗಿ ಸಬ್-ಸ್ಟೇಷನ್‌ನಲ್ಲಿ ಲೋಡ್ ಶೆಡ್ಡಿಂಗನ್ನೂ ಸಹ ಮಾಡಲಾಗುತ್ತಿದೆ.

ಅಲ್ಲದೇ ಗದಗ್‌ಗೆ ಒಂದು 220 110 ಕೆ.ವಿ. ವಿದ್ಯುತ್ ಕೇಂದ್ರವನ್ನು ರೂ. 17.7 ಕೋಟಿ ರೂ.ಗಳ ವೆಚ್ಚದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸೌಲಭ್ಯದಲ್ಲಿ ನಿರ್ಮಾಣ ಮಾಡುತ್ತಿದ್ದು, ನಿರ್ಮಾಣ ಕಾರ್ಯಗಳು ತೀವ್ರ ಪ್ರಗತಿಯಲ್ಲಿದೆ. ಅತೀ ಶೀಘ್ರದಲ್ಲಿಯೇ, ಈ ವಿದ್ಯುತ್ ಕೇಂದ್ರವನ್ನು ಚಾಲನೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ವಿದ್ಯುತ್ ಕೇಂದ್ರವು ಚಾಲನೆಗೊಂಡ ನಂತರ ವೋಲ್ಟೇಜ್ ಮಟ್ಟದಲ್ಲಿ ಬಹಳಷ್ಟು ಸುಧಾರಣೆಯುಂಟಾಗುತ್ತದೆ. ಇದರಿಂದಾಗಿ ಗದಗ್-ಬೇಟಗೇರಿಗೆ ಸರಬರಾಜು ಮಾಡುವ ಪಂಪಿಂಗ್ ಸ್ಟೇಷನ್‌ಗಳಿಗೂ ಅನುಕೂಲವಾಗುತ್ತದೆ.

ಹೆಚ್ಚುವರಿಯಾಗಿ ವೋಲ್ಟೇಜ್‌ನ ಸುಧಾರಣೆಗಾಗಿ ಪ್ರಸ್ತುತ ಮುಂಡರಗಿಯಲ್ಲಿರುವ 33 11 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು 110 : 33 ಕೆ.ವಿ.ಗೆ ರೂ. 762 ಲಕ್ಷ ವೆಚ್ಚದಲ್ಲಿ ಮೇಲ್ದರ್ಜೆಗೊಳಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಗೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯ ಪಡೆಯಲಾಗಿದೆ. ಈ ಕೆಲಸದ ಸಿವಿಲ್ ಕಾಮಗಾರಿಗಳು ಈಗ ಪ್ರಗತಿಯಲ್ಲಿದೆ.

ಗದಗ್-ಬೆಟಗೇರಿ ಅವಳಿ ನಗರಗಳಿಗೆ ನೀರು ಸರಬರಾಜು ಮಾಡುವ ಸ್ಥಾವರಗಳು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೇರಿದವಾಗಿದ್ದು, ಈ ಸ್ಥಾವರಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸುಮಾರು 7.8 ಕೋಟಿ ರೂ.ಗಳ ವಿದ್ಯುತ್ ಶುಲ್ಕದ ಬಾಕಿಯಿರುತ್ತದೆ. ಈ ಬಾಕಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಪಾವತಿ ಮಾಡಿದಲ್ಲಿ ವೋಲ್ಟೇಜ್ ಅಭಿವೃದ್ಧಿ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಇದು ಸಹಕಾರಿಯಾಗುತ್ತದೆ.

+ ಶ್ರೀ ಡಿ.ಆರ್. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಅಲ್ಲಿ ಕುಡಿಯುವ ನೀರು 8 ದಿವಸ 10 ದಿವಸಕ್ಕೊಮ್ಮೆ ಗದಗ್-ಬೆಟಗೇರಿ ನಗರಕ್ಕೆ ಸಪ್ಲೈಯಾಗುತ್ತಿದೆ. ವೊಲ್ಟೇಜ್ ಲೋಡ್ ಮ್ಯಾನೇಜ್‌ಮೆಂಟ್ ಮಾಡುವುದು ಅವರಿಗೆ ಸಮಸ್ಯೆಯಾಗಿದೆ. ಅದಕ್ಕೆ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಲೋಡ್ ಮ್ಯಾನೇಜ್ ಮೆಂಟ್ ಮಾಡುವುದು ಅವರಿಗೆ ಸಮಸ್ಯೆಯಾಗಿದೆ. ಅದಕ್ಕೆ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಲೋಡ್ ಮ್ಯಾನೇಜ್‌ಮೆಂಟನ್ನು ಮಾಡಬೇಕೆಂದು ಹೇಳಿ ಅಲ್ಲಿಯ ಅಧಿಕಾರಿಗಳಿಗೆ ಆದೇಶ ಕೊಡಬೇಕು. ಎರಡನೆಯದು ಅವರು ಲೋಡ್ ಇಂಪ್ರೂವ್‌ಮೆಂಟ್ ಮಾಡಲಿಕ್ಕೆ ವೊಲ್ಟೇಜ್ ರೆಗ್ಯುಲೇಟರ್ಸ್‌ನ್ನು ಎರಡು ಕೇಳುತ್ತಿದ್ದಾರೆ. ಅದಕ್ಕೆ ಸುಮಾರು ಎಂಟರಿಂದ ಹತ್ತು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಕೂಡಲೇ ನೀವು ಸಪ್ಲೈ ಮಾಡಿಸಿದಿರಿ ಎಂದರೆ ಮುಂದೆ ಮುಂಡರಗಿ ಸಬ್-ಸ್ಟೇಷನ್ ಆದಾಗ ಅವೆರಡೂ ನೀವು ವಿತ್‌ಡ್ರಾ ಮಾಡಿಕೊಂಡು ಮತ್ತೆ ಬೇರೆ ಕಡೆಗೆ ಡೈವರ್ಟ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಈ ಎರಡು ಕೆಲಸ ಕೂಡಲೇ ಮಾಡಿದಿರಿ ಎಂದರೆ ಈ ಬೇಸಿಗೆಗೆ ನೀರು ಸರಬರಾಜು ಸರಿಯಾಗುತ್ತದೆ. ಇಲ್ಲದಿದ್ದರೆ ನೀವು ಮುಂಡರಗಿ ಸ್ಟೇಷನ್ ಆದಮೇಲೆ ಅದು ಲೋಡ್ ಇಂಪ್ರೂವ್‌ಮೆಂಟ್ ಆಗಬೇಕೆಂದರೆ ಮುಂದಿನ ಬೇಸಿಗೆಗೆ ಆಗುತ್ತದೆ. ಈ ಬೇಸಿಗೆಗೆ ಈ ಕಾರ್ಯವನ್ನು ತಾವು ದಯವಿಟ್ಟು ಮಾಡಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:— ಮಾನ್ಯ ಅಧ್ಯಕ್ಷರೇ, ಅವರ ಸಲಹೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ನಮ್ಮಲ್ಲಿ ವಿದ್ಯುತ್ ಕೊರತೆ ಎನ್ನುವುದಕ್ಕಿಂತ 76-78 ದಶಲಕ್ಷ ಯೂನಿಟ್‌ಗಳು ಖರ್ಚಾಗುತ್ತವೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ ಸುಮಾರು 68 ರಿಂದ 70 ಮಾತ್ರ ಇತ್ತು. ಆದ್ದರಿಂದ ಈ ಒಂದು ಲೋಡ್ ಷೆಡ್ಡಿಂಗ್‌ನ್ನು ಅನಿವಾರ್ಯವಾಗಿ ಮಾಡಬೇಕಾದ ಪರಿಸ್ಥಿತಿ. ಲೋಡ್ ಷೆಡ್ಡಿಂಗ್ ಮಾಡದಿದ್ದರೆ ನಿಮ್ಮ ಮೆಷಿನ್‌ಗಳು ಉಳಿದುಕೊಳ್ಳುವುದಿಲ್ಲ. ಆ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಸ್ವಲ್ಪಮಟ್ಟಿಗೆ ಇದರಲ್ಲಿ ಸಹಕಾರವನ್ನು ಮಾಡಬೇಕಾಗುತ್ತದೆ. ಆದರೆ ಹೇಳಿರುವ ಸಲಹೆ ಯಾವುದು

ಉಂಟು, ಅದನ್ನು ಗಮನದಲ್ಲಿಟ್ಟುಕೊಂಡು ಲೋಡ್ ಷೆಡ್ಡಿಂಗ್‌ನಲ್ಲಿರುವುದಕ್ಕೆ ವ್ಯತ್ಯಾಸವಾಗುವ ಹಾಗೆ ಸಹಾಯ ಮಾಡುವ ಪರಿಸ್ಥಿತಿ ನಿರ್ಮಾಣವಾಗುವುದಾದರೆ ಖಂಡಿತವಾಗಿಯೂ ನಾವು ಅವರಿಗೆ ಆದೇಶವನ್ನು ಕೊಟ್ಟು ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :— ನೀವು ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಅಲ್ಲಿ ವಿದ್ಯುತ್ ಸರಬರಾಜಾಗುವ ಹಾಗೆ ಅವರು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ನೀವು ಇನ್‌ಸ್ಟ್ರಕ್ಷನ್ ಕೊಟ್ಟರೆ ಅವರು ಮ್ಯಾನೇಜ್ ಮಾಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ :— ಈ ಒಂದು ಪರಿಸ್ಥಿತಿ ಎಲ್ಲಾ ನಗರಗಳಲ್ಲೂ ಇದೆ. ನಿಮ್ಮ ಪಂಪಿಂಗ್ ಸ್ಟೇಷನ್ ಎಲ್ಲಿ ಇದೆ, ಅಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಎಲ್ಲೊ ಒಂದು ಕಡೆ ಲೋಡ್ ಜಾಸ್ತಿಯಾದಕೂಡಲೇ ಅವರೇನು ಮಾಡುತ್ತಾರೆಂದರೆ ಗ್ರಿಡ್‌ನಲ್ಲೇ ಅದನ್ನು ಆಫ್ ಮಾಡುತ್ತಾರೆ. ಅದನ್ನು ಮಾಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ ಸಾರಿಗೆ ಮಂತ್ರಿಗಳು :— ಮಾನ್ಯ ಅಧ್ಯಕ್ಷರೇ, ಮಾನ್ಯ ನಾಣಯ್ಯನವರು ತಿಳಿಸಿದ ಹಾಗೆ ಎಕ್ಸ್‌ಪ್ರೆಸ್ ಫೀಡರ್‌ನ್ನು ಹಾಕಬೇಕಾಗುತ್ತದೆ. ವಿಶೇಷವಾಗಿ ಅದನ್ನು ಹಾಕಿಕೊಡುವ ವ್ಯವಸ್ಥೆ ಮತ್ತು ಮುಂಡರಗಿ ಸ್ಟೇಷನ್‌ನಲ್ಲಿ ಆಗುವುದು ತಡವಾಗುತ್ತದೆ ಎಂದು ಹೇಳಿ ತಾವು ವೊಲ್ಟೇಜ್ ರೆಗ್ಯುಲೇಟರ್ಸ್ ಹಾಕಿ ಮಾಡುವಂಥದ್ದರ ಬಗ್ಗೆ ಏನು ಸೂಚನೆಯನ್ನು ಕೊಟ್ಟಿದ್ದಾರೆ, ಅದನ್ನು ಮಾಡಬಹುದು. ಎಂಟು ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು ಮಾಡುವಂಥ ಕಾರ್ಯ ಆಗಬಹುದು.

ಶ್ರೀ ಡಿ.ಆರ್. ಪಾಟೀಲ್ :— ಅದನ್ನು ಮಾಡುತ್ತೇವೆ.

(2) ತುಂಗಾ ಮೇಲ್ದಂಡೆ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಅಧ್ಯಕ್ಷರೇ, ಬಚಾವತ್ ತೀರ್ಪಿನ ಪ್ರಕಾರ ಎರಡು ಸಾವಿರ ಇಸವಿಯೊಳಗೆ ಕಾರ್ಯಗತಗೊಳಿಸಬೇಕಾದ ತುಂಗಾ ಮೇಲ್ದಂಡೆ ಯೋಜನೆಯ ಕಾರ್ಯವಿಳಂಬ ಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :— ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಜಿಲ್ಲೆಯ ಗಾಜನೂರು ಬಳಿ ಇರುವ ತುಂಗಾ ಆಣೆಕಟ್ಟನ್ನು ಎತ್ತಿಸಿ 339.50 ಕಿ.ಮೀ. ಎಡದಂಡೆ ಕಾಲುವೆ ಮೂಲಕ 99485 ಹೆಕ್ಟೇರ್ ಭೂಮಿಗೆ ನೀರಾವರಿ ನೀಡಲು 1988-89ರ ಸೂಚಿಯಂತೆ ರೂ.271.14 ಕೋಟಿಗಳ